**ಸಾಕ್ಷಿಯನ್ನು ದಿನಾಂಕ 09.12.2024 ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎನ್.ಎಂ.ಎಸ್ ವಕೀಲರಿಂದಃ**

ನಾನು ವಿಚ್ಚೇದನ ಕೋರಿ ಈ ಅರ್ಜಿಯನ್ನು ಸಲ್ಲಿಸಿದ್ದೇನೆ. ಅರ್ಜಿಯಲ್ಲಿ ತಿಳಿಸಿರುವ ವಿಚಾರಗಳನ್ನು ತಿಳಿದುಕೊಂಡಿದ್ದೇನೆ. ಎದುರುದಾರಳು ಸಲ್ಲಿಸಿರುವ ತಕರಾರಿನ ವಿಚಾರಗಳನ್ನು ತಿಳಿದುಕೊಂಡಿದ್ದೇನೆ. ನನ್ನ ಸ್ವಂತ ಊರು ಚಿಂತಾಮಣಿ ತಾಲ್ಲೂಕಿನ ಕುರುಬೂರು. ನಾನು ಈಗ ಚಿಂತಾಮಣಿ ನಗರದಲ್ಲಿ ವಾಸವಿದ್ದೇನೆ. ಕುರುಬೂರಿನಿಂದ ಚಿಂತಾಮಣಿಗೆ ಬಂದು 15 ರಿಂದ 16 ವರ್ಷ ಕಳೆದಿದೆ. ನನ್ನ ಮತ್ತು ಎದುರುದಾರಳ ಮದುವೆ ಹಿರಿಯರ ಮತ್ತು ಹಿತೈಷಿಗಳ ಒಪ್ಪಿಗೆಯಿಂದ ಆಗಿತ್ತು ಎಂದರೆ ಸರಿ.

2. ಮದುವೆಯಾದ ಬಳಿಕ ನಾನು ಮತ್ತು ಎದರುದಾರಳು ಕುರುಬೂರಿನಲ್ಲಿ ವಾಸವಿದ್ದೇವು. ಮದುವೆಯ ಸಮಯದಲ್ಲಿ ನಾನು ಗ್ರಾಮ ಲೆಕ್ಕಾಧಿಕಾರಿಯಾಗಿ ದಿಬ್ಬೂರಹಳ್ಳಿಯಲ್ಲಿ ಕೆಲಸ ಮಾಡುತ್ತಿದ್ದೆ. ಮದುವೆಯ ಸಮಯದಲ್ಲಿ ಎದುರುದಾರಳು ಕೆಲಸವನ್ನು ಮಾಡುತ್ತಿರಲಿಲ್ಲ. ಈ ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಿ ನಾನು ಶಿಡ್ಲಘಟ್ಟದಲ್ಲಿ ಕೆಲಸ ಮಾಡುತ್ತಿದ್ದೆ. ಈಗ ಕೋಲಾರದಲ್ಲಿ ತಹಶೀಲ್ದಾರ್ ಆಗಿ ಕೆಲಸ ಮಾಡುತ್ತಿದ್ದೇನೆ. ನಮ್ಮ ದಾಂಪತ್ಯದಿಂದ 1 ಗಂಡು ಮತ್ತು 1 ಹೆಣ್ಣು ಮಗು ಜನಿಸಿದೆ ಎಂದರೆ ಸರಿ. ಆ ಇಬ್ಬರು ಮಕ್ಕಳು ನನ್ನ ಜೊತೆ ವಾಸವಿದ್ದಾರೆ ಎಂದರೆ ಸರಿ. ನನ್ನ ಮಗ ಪದವಿಯನ್ನು ಮುಗಿಸಿದ್ದಾನೆ. ನನ್ನ ಮಗಳು ಈಗ 9 ನೇ ತರಗತಿ ಕಲಿಯುತ್ತಿದ್ದಾಳೆ. ನನ್ನ

ಮಗಳು ಅಪ್ರಾಪ್ತ ವಯಸ್ಕಳು ಎಂದರೆ ಸರಿ. 2016 ರಲ್ಲಿ ನನ್ನ ಮಗಳಿಗೆ 4 ವರ್ಷ ತುಂಬಿ 5 ವರ್ಷ ಆಗಿತ್ತು.

3. ಚಿಂತಾಮಣಿ ನಗರದಲ್ಲಿ ನಾವು ವಾಸವಿದ್ದ ಮನೆ ಎದುರುದಾರಳ ತಂದೆ ತಾಯಿಯರ ಮನೆಯಿಂದ 2 ಕ್ರಾಸ್‌ಗಳ ಅಂತರದಲ್ಲಿತ್ತು. ನಮ್ಮ ಮನೆಯಿಂದ ಎದುರುದಾರಳ ತಂದೆ ತಾಯಿಯರ ಮನೆ 1 ಸಾವಿರ ಮೀಟರ್ ಅಂತರದಲ್ಲಿ ಇರಬಹುದು. ಎದುರುದಾರಳು ಚಿಂತಾಮಣಿಯಲ್ಲಿ ಸರ್ಕಾರಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದಾಳೆ ಎಂದರೆ ಸರಿ. ಎದುರುದಾರಳ ತಂದೆ ಸರ್ಕಾರಿ ಶಿಕ್ಷಕರಾಗಿ ನಿವೃತ್ತಿ ಹೊಂದಿದ್ದಾರೆ ಎಂದರೆ ಸಾಕ್ಷಿ ಸರ್ಕಾರಿ ಶಿಕ್ಷಕರಾಗಿದ್ದರು, ಈಗ ಏನಾಗಿದ್ದಾರೆ ಎಂದು ನನಗೆ ಗೊತ್ತಿಲ್ಲ. ಎದುರುದಾರಳ ತಾಯಿಯು ಸಹಾ ಸರ್ಕಾರಿ ಶಿಕ್ಷಕರಾಗಿ ನಿವೃತ್ತಿ ಹೊಂದಿದ್ದಾರೆ ಎಂದರೆ ಸಾಕ್ಷಿ ಸರ್ಕಾರಿ ಶಿಕ್ಷಕರಾಗಿದ್ದರು, ಈಗ ಏನಾಗಿದ್ದಾರೆ ಎಂದು ನನಗೆ ಗೊತ್ತಿಲ್ಲ.

4. ನಮ್ಮ ಮದುವೆಯನ್ನು ಎದುರುದಾರಳ ತಂದೆ ತಾಯಿಯರು ಖರ್ಚು ವೆಚ್ಚಗಳನ್ನು ಭರಿಸಿ ನೆರವೇರಿಸಿದ್ದಾರೆ ಎಂದರೆ ಸರಿಯಲ್ಲ. ಮದುವೆಯ ಕಾಲದಲ್ಲಿ ಎದುರುದಾರಳ ತಂದೆ ತಾಯಿಯರು 2 ಜೊತೆ ಓಲೆ, 2 ಜೊತೆ ನೆಕ್ಲೇಸ್, 1 ಹಾರ, 1 ಜೊತೆ ಬಂಗಾರದ ಬಳೆ ಎದುರುದಾರಳಿಗೆ ನೀಡಿ ಮದುವೆ ಮಾಡಿದ್ದಾರೆ ಎಂದರೆ ಸುಳ್ಳು. ಮದುವೆಯ ಕಾಲದಲ್ಲಿ ಎದುರುದಾರಳ ತಂದೆ ತಾಯಿಯರು 1 ಬ್ರೇಸ್‌ಲೈಟ್, 1 ಕತ್ತಿನ ಚೈನ್, 1 ನವರತ್ನದ ಉಂಗುರ ಮತ್ತು 10 ಲಕ್ಷ ಹಣವನ್ನು ನನಗೆ ನೀಡಿದ್ದರು ಎಂದರೆ ಸುಳ್ಳು. ಆ ಎಲ್ಲಾ ಬಂಗಾರದ ಆಭರಣಗಳು ನನ್ನ ವಶದಲ್ಲಿಯೇ ಇವೇ ಎಂದರೆ ಸುಳ್ಳು.

ಮದುವೆಯಾದ ಬಳಿಕ ನಾನು ಮತ್ತು ಎದುರುದಾರಳು 4 ವರ್ಷ ಕುರುಬೂರಿನಲ್ಲಿ ವಾಸವಿದ್ದೇವು, ನಂತರ ಚಿಂತಾಮಣಿಗೆ ಬಂದಿದ್ದೇವು. ಕುರುಬೂರಿನಲ್ಲಿ ವಾಸವಿದ್ದಾಗ ನಮಗೆ ಮಗ ಜನಿಸಿದ್ದ, ಚಿಂತಾಮಣಿಗೆ ಬಂದ ನಂತರ ಮಗಳು ಜನಿಸಿದ್ದಳು. ಮಕ್ಕಳು ಜನಿಸಿದ ಬಳಿಕ ಮಕ್ಕಳ ಯೋಗ ಕ್ಷೇಮವನ್ನು ನನ್ನ ಅತ್ತೆ ನೋಡಿದ್ದರು ಎಂದರೆ ಸುಳ್ಳು.

5. ಮಕ್ಕಳು ಜನಿಸಿದ ಬಳಿಕ ಎಲ್ಲಿಯವರೆಗೂ ನೀವು ಚೆನ್ನಾಗಿದ್ದೀರಿ ಎಂದರೆ ಸಾಕ್ಷಿ ಮಕ್ಕಳು ಜನಿಸಿದ 4 ವರ್ಷಗಳವರೆಗೂ ನಾವು ಚೆನ್ನಾಗಿದ್ದೆವು, ನಂತರ ಎದುರುದಾರಳು ಅವರ ತಾಯಿಯ ಮನೆಗೆ ಹೊರಟು ಹೋದಳು ಎಂದು ನುಡಿಯುತ್ತಾರೆ. ಮದುವೆಯಾದಾಗಿನಿಂದಲೂ ದಿನಾಂಕಃ 14.02.2022 ರವರೆಗೂ ನಾನು ಮತ್ತು ಎದುರುದಾರಳು ಒಟ್ಟಿಗೆ ವಾಸವಿದ್ದೇವು ಎಂದರೆ ಸಾಕ್ಷಿ 2016 ರಲ್ಲಿ ಎದುರುದಾರಳು ಹೊರಟು ಹೋಗಿದ್ದಳು ಎಂದು ನುಡಿಯುತ್ತಾರೆ. ಮಕ್ಕಳು ಬೆಳೆದಂತೆ ನಾನು ಮಕ್ಕಳನ್ನು ಮತ್ತು ಎದುರುದಾರಳನ್ನು ಚೆನ್ನಾಗಿ ನೋಡಿಕೊಳ್ಳುತ್ತಿರಲಿಲ್ಲ, ಇತರೆ ಹೆಣ್ಣುಮಕ್ಕಳ ಜೊತೆ ಸಂಬಂಧವನ್ನು ಹೊಂದಿ ಎದುರುದಾರಳಿಗೆ ಮಾನಸಿಕ ಕಿರುಕುಳ ನೀಡುತ್ತಿದ್ದೆ ಎಂದರೆ ಸುಳ್ಳು.

6. ನನ್ನ ಮತ್ತು ಎದುರುದಾರಳ ವಿಚಾರಕ್ಕೆ ಸಂಬಂಧಿಸಿದಂತೆ ನ್ಯಾಯ ಪಂಚಾಯ್ತಿ ನಡೆದಿಲ್ಲ. ನನ್ನ ಅರ್ಜಿಯಲ್ಲಿ ನನ್ನ ಮತ್ತು ಎದುರುದಾರಳ ವಿಚಾರಕ್ಕೆ ಸಂಬಂಧಿಸಿದಂತೆ ನ್ಯಾಯ ಪಂಚಾಯ್ತಿ ನಡೆದಿಲ್ಲ ಎಂದು ಹೇಳಿ ಬರೆಸಿಲ್ಲ. ನಾನು ಎದುರುದಾರಳಿಗೆ ಮಾನಸಿಕ ಹಿಂಸೆ ನೀಡಿ ಹೆಚ್ಚಿನ ವರದಕ್ಷಿಣೆಯನ್ನು ತವರು ಮನೆಯಿಂದ ತರುವಂತೆ

ಒತ್ತಾಯಿಸುತ್ತಿದ್ದೆ, ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳುತ್ತಿರಲಿಲ್ಲ ಎಂದರೆ ಸುಳ್ಳು. ಹಿರಿಯರು ನನಗೆ ನನ್ನ ದುಷ್ಟ ಚಟಗಳನ್ನು ಬಿಟ್ಟು ಎದುರುದಾರಳು ಮತ್ತು ಮಕ್ಕಳನ್ನು ನೋಡಿಕೊಳ್ಳುವಂತೆ ಬುದ್ದಿ ಹೇಳಿದ್ದರಿಂದ ಇಲ್ಲಸಲ್ಲದ ಆರೋಪಗಳನ್ನು ಮಾಡಿ ಈ ಸುಳ್ಳು ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಎರಡೂ ಕಡೆಯ ಕುಟುಂಬದವರು ನನಗೆ ಸುಮಾರು 10 ಬಾರಿ ನನ್ನ ವರ್ತನೆಯನ್ನು ಸರಿ ಮಾಡಿಕೊಳ್ಳುವಂತೆ ತಿಳಿ ಹೇಳಿದ್ದರು ಎಂದರೆ ಸುಳ್ಳು.

7. ದಿನಾಂಕಃ 14.02.2022 ರಂದು ನಾನು, ನನ್ನ ತಾಯಿ ಲಕ್ಷ್ಮೀದೇವಮ್ಮ, ತಮ್ಮ ಆನಂದ್ ಮತ್ತು ಚಿಕ್ಕಪ್ಪನ ಮಗನಾದ ನಾಗೇಶ್ ರವರು ಎದುರುದಾರರಿಗೆ ಹೊಡೆದು, ಗಲಾಟೆ ಮಾಡಿ ಮನೆಯಿಂದ ರಾತ್ರಿ ಆಚೆ ಹಾಕಿದ್ದೇವು ಎಂದರೆ ಸುಳ್ಳು. ಮನೆಯಿಂದ ಎದುರುದಾರಳನ್ನು ಆಚೆ ಹಾಕಿದ ಕಾರಣ ಪೋಲಿಸರು ನಮ್ಮ ಮನೆಗೆ ಬಂದಿದ್ದರು, ನಂತರ ನಾನು ಎದುರುದಾರರನ್ನು ಆಕೆಯ ತಂದೆ ತಾಯಿಯರ ಮನೆಗೆ ಬಿಟ್ಟು ಬಂದಿದ್ದೇ ಎಂದರೆ ಸುಳ್ಳು. ಆ ಗಲಾಟೆಯ ವಿಚಾರವಾಗಿ ಚಿಂತಾಮಣಿಯ ನಗರ ಠಾಣೆಯಲ್ಲಿ ನಮ್ಮ ವಿರುದ್ದ ದೂರು ದಾಖಲಾಗಿ ಆ ಪ್ರಕರಣ ಈಗ ಚಿಂತಾಮಣಿಯ ಪ್ರಧಾನ ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಸಿಸಿ ನಂ.30/2022 ರಂತೆ ವಿಚಾರಣೆ ನಡೆಯುತ್ತಿದೆ ಎಂದರೆ ಸರಿ. ಸಾಕ್ಷಿ ಆ ಪ್ರಕರಣ ವರದಕ್ಷಿಣೆಯ ಪ್ರಕರಣ ಎಂದು ನುಡಿಯುತ್ತಾರೆ.

8. ಆ ಕ್ರಿಮಿನಲ್ ಪ್ರಕರಣದಿಂದ ತಪ್ಪಿಸಿಕೊಳ್ಳಲು ನಾನು ನನ್ನ ಮಗನ ಮೂಲಕ ಎದುರುದಾರಳು ಮತ್ತು ಆಕೆಯ ತಂದೆ ತಾಯಿ ಮತ್ತು ಆಕೆಯ ಸಹೋದರ ಮತ್ತು ಇತರೆ 8 ಜನರ ಮೇಲೆ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸಾಕ್ಷಿ ಆ ಪ್ರಕರಣ ನಾನು ಮನೆಯಲ್ಲಿ ಇಲ್ಲದಾಗ ನಡೆದಿದ್ದು ಆ ವಿಚಾರವಾಗಿ ದಾಖಲಾಗಿದೆ ಎಂದು ನುಡಿಯುತ್ತಾರೆ. ನನಗೆ ಸಾಕಷ್ಟು ಬಾರಿ ನನ್ನ ವರ್ತನೆಯನ್ನು ಸರಿ ಮಾಡಿಕೊಳ್ಳಲು ತಿಳಿ ಹೇಳಿದರೂ ಸಹಾ ನಾನು ಕೇಳದ ಕಾರಣ ಎದುರುದಾರಳು ನನ್ನ ಮೇಲೆ ಪರಿಹಾರಗಳನ್ನು ಕೋರಿ ಡಿವಿಸಿ ನಂ.5/2022 ರಂತೆ ಪ್ರಕರಣವನ್ನು ಪ್ರಧಾನ ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ದಾಖಲಿಸಿದ್ದರು ಎಂದರೆ ಸಾಕ್ಷಿ ಪ್ರಕರಣವನ್ನು ದಾಖಲಿಸಿದ್ದಾರೆ ಎಂದು ನುಡಿಯುತ್ತಾರೆ. ಆ ಪ್ರಕರಣವನ್ನು ಎದುರುದಾರಳು ಮನೆಯಲ್ಲಿ ವಾಸವಿರಲು ಮತ್ತು ಪೋಲಿಸರ ರಕ್ಷಣೆ ಕೋರಿ ಸಲ್ಲಿಸಿದ್ದಾರೆ ಯಾವುದೇ ಜೀವನಾಂಶವನ್ನು ಆ ಅರ್ಜಿಯಲ್ಲಿ ಎದುರುದಾರಳು ಕೇಳಿಲ್ಲ ಎಂದರೆ ಸಾಕ್ಷಿ ಜೀವನಾಂಶವನ್ನು ಕೇಳಿದ್ದಾರೆ ಎಂದು ನುಡಿಯುತ್ತಾರೆ.

9. ನಾನು ನನ್ನ ಮಕ್ಕಳಿಗೆ ಎದುರುದಾರಳ ವಿರುದ್ದ ಇಲ್ಲ ಸಲ್ಲದ ವಿಚಾರಗಳನ್ನು ಹೇಳಿ ನನ್ನ ಸುಪರ್ದಿಯಲ್ಲಿಯೇ ಬೆದರಿಕೆ ಹಾಕಿ ಇಟ್ಟುಕೊಂಡಿದ್ದೇನೆ ಎಂದರೆ ಸುಳ್ಳು. ನನ್ನ ಮಕ್ಕಳು ಎದುರುದಾರಳನ್ನು ಮತ್ತು ಎದುರುದಾರಳ ತಂದೆ ತಾಯಿಯರನ್ನು ಬೇಟಿ ಮಾಡದಂತೆ ಮನೆಯಲ್ಲಿಯೇ ಬಂದಿಸಿರುವ ರೀತಿ ಇಟ್ಟುಕೊಂಡಿದ್ದೇನೆ ಎಂದರೆ ಸುಳ್ಳು. ಮಕ್ಕಳನ್ನು ಎದುರುದಾರಳಿಂದ ದೂರ ಇಟ್ಟಿರುವುದರಿಂದ ಮಕ್ಕಳ ಆರೋಗ್ಯಕ್ಕೆ

ತೊಂದರೆ ಆಗಿದೆ ಎಂದರೆ ಸುಳ್ಳು. ಎದುರುದಾರಳು ನನ್ನ ಮೇಲೆ ಮತ್ತು ಮಕ್ಕಳ ಮೇಲೆ ತುಂಬಾ ಪ್ರೀತಿ, ವಾತ್ಸಲ್ಯವನ್ನು ಹೊಂದಿದ್ದಾರೆ ಎಂದರೆ ಸುಳ್ಳು. ಮಕ್ಕಳ ಭವಿಷ್ಯಕ್ಕಾಗಿ ಮತ್ತು ಅವರ ಮದುವೆಯನ್ನು ಮಾಡಲು ಎದುರುದಾರಳ ಆರೈಕೆಯ ಅವಶ್ಯಕತೆ ಮಕ್ಕಳಿಗೆ ಇದೆ ಎಂದರೆ ಸುಳ್ಳು.

10. ಮಕ್ಕಳನ್ನು ತನ್ನ ಸುಪರ್ದಿಗೆ ಕಾನೂನು ಪ್ರಕಾರ ಪಡೆಯಲು ಪ್ರಯತ್ನಿಸಿದರೆ ಮಕ್ಕಳಿಗೆ ತೊಂದರೆ ಇದೆ ಎಂಬ ಕಾರಣದಿಂದ ಎದುರುದಾರಳು ಯಾವುದೇ ಕ್ರಮ ಕೈಗೊಂಡಿಲ್ಲ ಎಂದರೆ ಸುಳ್ಳು. ದಿನಾಂಕಃ 14/02/2022 ರಂದು ಎದುರುದಾರಳು ನನ್ನ ಮನೆಗೆ ಪ್ರವೇಶ ಮಾಡಲು ಪ್ರಯತ್ನಿಸಿದರೂ ಸಹಾ ಆಕೆಯನ್ನು ಮನೆಗೆ ಸೇರಿಸದೇ ಆಕೆಯ ತವರು ಮನೆಗೆ ಕಳುಹಿಸಿರುತ್ತೇನೆ ಎಂದರೆ ಸುಳ್ಳು. ವಿಚ್ಛೇದನೆ ಪಡೆಯಬೇಕೆಂಬ ನನ್ನ ಹಠದಿಂದ ಮಕ್ಕಳ ವಿದ್ಯಾಭ್ಯಾಸ ಮತ್ತು ಎದುರುದಾರಳಿಗೆ ತುಂಬಾ ತೊಂದರೆ ಆಗುತ್ತಿದೆ ಎಂದರೆ ಸಾಕ್ಷಿ ಮಕ್ಕಳಿಗೆ ಯಾವುದೇ ತೊಂದರೆ ಆಗುತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಮಕ್ಕಳು ಅವರ ತಾಯಿಯನ್ನು ಮನೆಗೆ ಕರೆ ತರುವಂತೆ ಸಾಕಷ್ಟು ಬಾರಿ ಹೇಳಿದರೂ ಮತ್ತು ತಾಯಿಯ ಜೊತೆ ಫೋನಿನಲ್ಲಿ ಮಾತನಾಡಲು ಸಹಾ ಅವಕಾಶ ನೀಡುತ್ತಿಲ್ಲ ಎಂದರೆ ಸರಿಯಲ್ಲ.

11. ಎದುರುದಾರಳು 2016 ರಲ್ಲಿ ಮನೆಯನ್ನು ಬಿಟ್ಟು ಹೋಗಿದ್ದಾಳೆ ಎಂಬ ಬಗ್ಗೆ ದಾಖಲೆಗಳು ಇವೆ. 2016 ರಲ್ಲಿ ಎದುರುದಾರಳು ಮನೆ ಬಿಟ್ಟು ಹೋಗಿದ್ದಳು

ಎಂಬ ಬಗ್ಗೆ ನಾನು ಯಾವುದೇ ಸಿಸಿ ಫ್ಯೂಟೇಜ್‌ಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

12. 2016 ರಿಂದ 2022 ರವರೆವಿಗೂ ಎದುರುದಾರರನ್ನು ಮನೆಗೆ ಕರೆ ತರಲು ಏನು ಕ್ರಮ ಕೈಗೊಂಡಿದ್ದೀರಿ ಎಂದರೆ ಸಾಕ್ಷಿ ಎದುರುದಾರಳೇ ಮನೆ ಮತ್ತು ಮಕ್ಕಳು ಬೇಡ ಎಂದು ಹೋದ ಕಾರಣ ನಾನು ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ನುಡಿಯುತ್ತಾರೆ. ನಾನು ಎದುರುದಾರಳ ವಿರುದ್ದ ಯಾವುದೇ ದೂರನ್ನು ಪೋಲಿಸರಿಗೆ ನೀಡಿಲ್ಲ. ಜೊತೆಗೆ ಬಂದು ಸಂಸಾರ ಮಾಡುವಂತೆ ಎದುರುದಾರಳಿಗೆ ವಕೀಲರ ಮೂಲಕ ನೋಟಿಸ್ ನೀಡಿಲ್ಲ. ಎದುರುದಾರಳು 2022 ರವರೆವಿಗೂ ನನ್ನ ಜೊತೆಯಲ್ಲಿಯೇ ವಾಸವಿದ್ದ ಕಾರಣ ನಾನು ಯಾವುದೇ ಕ್ರಮವನ್ನು ಕೈಗೊಂಡಿಲ್ಲ ಎಂದರೆ ಸುಳ್ಳು. 2016 ರಲ್ಲಿ ಎದುರುದಾರಳು ಮನೆಯನ್ನು ಬಿಟ್ಟು ಹೋಗಿದ್ದಳು ಎಂದು ವಿಚ್ಛೇದನೆ ಪಡೆಯುವ ಉದ್ದೇಶದಿಂದ ನನ್ನ ಅರ್ಜಿಯಲ್ಲಿ ಸುಳ್ಳು ಹೇಳಿ ಬರೆಸಿದ್ದೇನೆ ಎಂದರೆ ಸರಿಯಲ್ಲ. ದಿನಾಂಕಃ 14.02.2022 ರಂದು ಎದುರುದಾರಳನ್ನು ಹೊಡೆದು ಆಚೆ ಹಾಕಿದ 10 ದಿನಗಳ ಬಳಿಕ ಈ ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸಾಕ್ಷಿ ಎದುರುದಾರಳು ನನ್ನ ಮೇಲೆ ವರದಕ್ಷಿಣೆ ಕಿರುಕುಳದ ಪ್ರಕರಣ ಮತ್ತು ನನ್ನ ಕಛೇರಿಯಲ್ಲಿ ಸುಮಾರು ದೂರನ್ನು ದಾಖಲಿಸಿದ ಬಳಿಕ ಈ ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ಆ ರೀತಿಯ ಯಾವುದೇ ದೂರನ್ನು ಎದುರುದಾರಳು ನನ್ನ ವಿರುದ್ದ ದಾಖಲಿಸಿಲ್ಲ ಎಂದರೆ ಸರಿಯಲ್ಲ.

13. ನಾನು ವಿದ್ಯಾವಂತನಾಗಿದ್ದು ಉತ್ತಮ ಹುದ್ದೆಯಲ್ಲಿ ಇರುವುದರಿಂದ ವಿಚ್ಛೇದನೆ ಪಡೆಯುವ ಉದ್ದೇಶದಿಂದ ಸುಳ್ಳು ಕಾರಣಗಳನ್ನು ಹೇಳಿ ಈ ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಎದುರುದಾರಳ ಜೊತೆ ಮದುವೆಯನ್ನು ಉತ್ತಮ ಭವಿಷ್ಯ ಮತ್ತು ಮಕ್ಕಳನ್ನು ಪಡೆಯುವ ಉದ್ದೇಶದಿಂದ ಮಾಡಿಕೊಂಡಿದ್ದೇ ಎಂದರೆ ಸರಿ. ದಿನಾಂಕಃ 14.02.2022 ರಂದು ಆದ ಜಗಳದ ವಿಚಾರವನ್ನು ಇಟ್ಟುಕೊಂಡು ಎದುರುದಾರಳಿಂದ ವಿಚ್ಛೇದನೆ ಪಡೆಯಬೇಕು ಎಂಬ ಉದ್ದೇಶದಿಂದಲೇ ಈ ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರು ನನ್ನ ಜೊತೆ ವಾಸವಿದ್ದಾಗ ಮಕ್ಕಳನ್ನು ಮತ್ತು ನನ್ನ ತಾಯಿಯನ್ನು ತುಂಬಾ ಚೆನ್ನಾಗಿ ನೋಡಿಕೊಳ್ಳುತ್ತಿದ್ದರು ಎಂದರೆ ಸುಳ್ಳು.

14. ನಾನು ಮನೆಯಿಂದ ಕಛೇರಿಗೆ ಒಂದೊಂದು ದಿನ ಒಂದು ಸಮಯಕ್ಕೆ ಹೋಗುತ್ತಿದ್ದೇ. ಸಂಜೆಯು ಸಹಾ 7 ಘಂಟೆ ಅಥವಾ ಅದಕ್ಕೂ ಹೆಚ್ಚಿನ ಸಮಯದಲ್ಲಿ ನಾನು ಕಛೇರಿಯಿಂದ ಮನೆಗೆ ಬರುತ್ತಿದ್ದೆ. ಎದುರುದಾರರು ನನ್ನನ್ನು ಪ್ರೀತಿಯಿಂದ ನೋಡುತ್ತಿದ್ದರಿಂದ, ಎದುರುದಾರಳು ನಾನು ತಡವಾಗಿ ಕಛೇರಿಯಿಂದ ಬರುವುದನ್ನು ಪ್ರಶ್ನಿಸಿದ್ದಕ್ಕೆ ಆಕೆಯೊಂದಿಗೆ ಗಲಾಟೆ ಮಾಡಿ ವಿಚ್ಛೇದನ ನೀಡು ಎಂದು ಹೇಳುತ್ತಿದ್ದೇ ಎಂದರೆ ಸುಳ್ಳು. ನಾನು ತಡವಾಗಿ ಕಛೇರಿಯಿಂದ ಬರುತ್ತಿದ್ದ ಕಾರಣ ಎದುರುದಾರಳು ಮಕ್ಕಳನ್ನು ಮತ್ತು ನನ್ನ ತಾಯಿಯನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದಳು ಎಂದರೆ ಸಾಕ್ಷಿ ನನ್ನ ಮಗ 5 ನೇ ತರಗತಿಯಿಂದ ಹಾಸ್ಟೆಲ್‌ನಲ್ಲಿ ಕಲಿಯುತ್ತಿದ್ದ ಎಂದು ನುಡಿಯುತ್ತಾರೆ.

ನನ್ನ ಮಗ ಚಿಂತಾಮಣಿಯಲ್ಲಿ ಪದವಿಯನ್ನು ಮುಗಿಸಿದ್ದಾರೆ ಎಂದರೆ ಸಾಕ್ಷಿ ಬೆಂಗಳೂರಿನಲ್ಲಿ ಎಂದು ನುಡಿಯುತ್ತಾರೆ. ನನ್ನ ಮಗಳು ಚಿಂತಾಮಣಿಯಲ್ಲಿ ಕಲಿಯುತ್ತಿದ್ದಾಳೆ ಎಂದರೆ ಸರಿ. ಎದುರುದಾರಳನ್ನು ಆಕೆಯ ತವರು ಮನೆಗೆ ಕಳುಹಿಸಿದ್ದರಿಂದ ಮಕ್ಕಳ ವಿದ್ಯಾಭ್ಯಾಸಕ್ಕೆ ತುಂಬಾ ತೊಂದರೆ ಆಗುತ್ತಿದೆ ಎಂದರೆ ಸುಳ್ಳು.

15. ನನ್ನ ತಂದೆ ತೀರಿಕೊಂಡು 38 ರಿಂದ 39 ವರ್ಷ ಕಳೆದಿದೆ. ನನ್ನ ತಾಯಿಗೆ ಈಗ 83 ವರ್ಷ. ನಮ್ಮ ತಂದೆ ತಾಯಿಗೆ ನಾವು 5 ಜನ ಮಕ್ಕಳು. ನಾನು 3ನೇಯ ಮಗ. ಮದುವೆಯಾದ ಬಳಿಕ ನಮ್ಮೆಲ್ಲರ ಯೋಗ ಕ್ಷೇಮವನ್ನು ಎದುರುದಾರಳೇ ನೋಡಿಕೊಳ್ಳುತ್ತಿದ್ದಳು ಎಂದರೆ ಸುಳ್ಳು. ನನ್ನ ತಾಯಿ ನನ್ನ ಜೊತೆಯಲ್ಲಿಯೇ ವಾಸವಿದ್ದಾಳೆ. ಕುರುಬೂರಿನಿಂದ ಚಿಂತಾಮಣಿಗೆ ನಾವು ಬಂದಾಗ ನಮ್ಮ ತಾಯಿಯು ಸಹಾ ನಮ್ಮ ಜೊತೆ ಬಂದಿದ್ದರು. ಚಿಂತಾಮಣಿಗೆ ನಾನು, ಎದುರುದಾರಳು, ನನ್ನ ಮಗ ಮತ್ತು ನನ್ನ ತಾಯಿ ಬಂದ ನಂತರ ನಮಗೆ ಮಗಳು ಜನಿಸಿದ್ದಳು ಎಂದರೆ ಸರಿ. ನನ್ನ ತಾಯಿಗೆ ವಯಸ್ಸು ಆದ ಕಾರಣ ಎದುರುದಾರಳೇ ನನ್ನ ತಾಯಿಯ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದಳು ಎಂದರೆ ಸುಳ್ಳು. ಎದುರುದಾರಳಿಗೆ ನನ್ನಿಂದ ಮತ್ತು ನನ್ನ ತಾಯಿಯಿಂದ ಯಾವುದೇ ತೊಂದರೆ ಆದರೂ ಸಹಾ ಹೊಂದಿಕೊಂಡು ಸಂಸಾರವನ್ನು ನಡೆಸಿಕೊಂಡು ಹೋಗುತ್ತಿದ್ದರು ಎಂದರೆ ಸುಳ್ಳು.

16. ಎದುರುದಾರಳು ನನ್ನ ಜೊತೆ ಇದ್ದಾಗ ಆನೂರಿನ ಸರ್ಕಾರಿ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದಳು. ಆನೂರಿನಿಂದ ಚಿಂತಾಮಣಿಗೆ ಎದುರುದಾರಳಿಗೆ ವರ್ಗಾವಣೆ ಆಗಿದೆ

ಎಂದರೆ ನನಗೆ ಗೊತ್ತಿಲ್ಲ. ಆ ವಿಚಾರ ತಿಳಿದಿದ್ದರೂ ಸಹಾ ಸುಳ್ಳು ಸಾಕ್ಷಿ ನುಡಿಯುತ್ತಿದೇನೆ ಎಂದರೆ ಸರಿಯಲ್ಲ. ಎದುರುದಾರಳಿಗೆ ಬಂದ ವೇತನವನ್ನು ಕುಟುಂಬದ ಸಲುವಾಗಿ ಎದುರುದಾರರು ನನ್ನ ಕೈಗೆ ನೀಡುತ್ತಿದ್ದಳು ಎಂದರೆ ಸುಳ್ಳು. ಚಿಂತಾಮಣಿಯಲ್ಲಿ ನಾನು ವಾಸವಿರುವ ಮನೆ 3 ಮಹಡಿಯ ಕಟ್ಟಡವಾಗಿರುತ್ತಿದೆ. ಆ ಮನೆ ಈಗ ನನ್ನ ಹೆಸರಿನಲ್ಲಿದೆ. ಆ ಮನೆಯ ಪೈಕಿ ಮೊದಲ ಮಹಡಿಯನ್ನು ನಾನು ಸಾಲ ಮಾಡಿ ಖರೀದಿಸಿದ್ದೇ. ಆ ಮನೆಯನ್ನು ಎದುರುದಾರಳ ಸಂಬಳದಿಂದ ಬ್ಯಾಂಕಿನಲ್ಲಿ ಸಾಲ ಪಡೆದು ಖರೀದಿಸಿದ್ದು, ಆ ಮನೆಯ ಸಾಲ ತೀರುವವರೆವಿಗೂ ಎದುರುದಾರಳನ್ನು ಜೊತೆಯಲ್ಲಿಯೇ ಇಟ್ಟುಕೊಂಡು ಸಾಲ ತೀರಿದ ಬಳಿಕ ಆಚೆ ಹಾಕಿದ್ದೇನೆ ಎಂದರೆ ಸಾಕ್ಷಿ ಮನೆಯನ್ನು ನಾನು ಬ್ಯಾಂಕಿನಲ್ಲಿ ಸಾಲ ಮಾಡಿ ಖರೀದಿಸಿದ್ದೇನೆ ಎಂದು ನುಡಿಯುತ್ತಾರೆ.

17. ಮೊದಲನೇ ಮತ್ತು ಎರಡನೇ ಮಹಡಿಯ ಕಟ್ಟಡವನ್ನು ನಿರ್ಮಿಸುವಾಗ ಎದುರುದಾರಳ ಸಂಬಳದಿಂದ ಋಣಸಾಲ ಎಂದು ಪಡೆದುಕೊಂಡಿದ್ದೇವು ಎಂದರೆ ಸುಳ್ಳು. ಎದುರುದಾರಳು ಸಾಲವನ್ನು ಪಡೆದ ದಾಖಲೆಗಳು ಎದುರುದಾರಳ ಬಳಿ ಇವೆ ಎಂದರೆ ಸುಳ್ಳು. ಎದುರುದಾರಳ ತಂದೆ ತಾಯಿಯರು ನಾವು ಮತ್ತು ಮಕ್ಕಳು ಚೆನ್ನಾಗಿರಬೇಕೆಂದು ಅವರ ಸಂಬಳದಿಂದ ಬಂದ ಹಣದಿಂದ ಮನೆಯನ್ನು ನಿರ್ಮಿಸಿಕೊಟ್ಟಿದ್ದಾರೆ ಎಂದರೆ ಸುಳ್ಳು. ಆ ಮನೆ ನನ್ನ ಹೆಸರಿನಲ್ಲಿ ಖಾತೆ ಇದೆ ಎಂಬ ಕಾರಣದಿಂದ ಮಕ್ಕಳನ್ನು ನನ್ನ ಸುಪರ್ದಿಯಲ್ಲಿ ಇಟ್ಟುಕೊಂಡು ಎದುರುದಾರಳನ್ನು ಮನೆಗೆ ಸೇರಿಸದೇ ತೊಂದರೆ ನೀಡುತ್ತಿದ್ದೇನೆ ಎಂದರೆ ಸುಳ್ಳು.

18. ಎದುರುದಾರಳ ತಂದೆ ತಾಯಿಯರು ಸರ್ಕಾರಿ ನೌಕರಿಯಿಂದ ನಿವೃತ್ತಿ ಹೊಂದಿದ್ದು, ಎದುರುದಾರಳು ಸಹಾ ಸರ್ಕಾರಿ ನೌಕರಿಯಲ್ಲಿದ್ದು ನನ್ನಿಂದ ಅವರ ಗೌರವಕ್ಕೆ ತೊಂದರೆ ಆಗುತ್ತಿದೆ ಎಂದರೆ ಸುಳ್ಳು. ಅರ್ಜಿಯಲ್ಲಿ ಕೇಳಿರುವ ಪರಿಹಾರವನ್ನು ಪಡೆಯಲು ನಾನು ಅರ್ಹನಲ್ಲ ಎಂದರೆ ಸರಿಯಲ್ಲ. ಎದುರುದಾರಳು ದಿನಾಂಕಃ 14.02.2022 ರಿಂದ ಇಲ್ಲಿಯವರೆಗೂ ನನ್ನ ಜೊತೆ ಬಂದು ಸಂಸಾರ ಮಾಡಲು ತಯಾರು ಇದ್ದಾರೆ ಎಂದರೆ ಸುಳ್ಳು. ಅರ್ಜಿದಾರಳು ಈಗಲೂ ಸಹಾ ನನ್ನ ಮತ್ತು ಮಕ್ಕಳ ಜೊತೆ ಬಂದು ಸಂಸಾರ ಮಾಡಲು ಸಿದ್ದಳಿದ್ದಾಳೆ ಎಂದರೆ ಸುಳ್ಳು. ಮಕ್ಕಳು ಈಗಲೂ ಸಹಾ ಎದುರುದಾರಳನ್ನು ಮನೆಗೆ ಕರೆತರುವಂತೆ ಹೇಳುತ್ತಿದ್ದು ನಾನು ಎದುರುದಾರಳನ್ನು ಸೇರಿಸುತ್ತಿಲ್ಲ ಎಂದರೆ ಸರಿಯಲ್ಲ. ನನ್ನ ಅರ್ಜಿಯ 4 ನೇ ಪ್ಯಾರಾದಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ 7 ನೇ ಪ್ಯಾರಾದಲ್ಲಿ ದಿನಾಂಕಃ 28.03.2020 ರಿಂದ 28.07.2020 ರವರೆಗೂ ಆಸ್ಪತ್ರೆಯಲ್ಲಿ ದಾಖಲಾಗಿದ್ದೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸಾಕ್ಷಿ ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. 2020 ರಲ್ಲಿ ನಾನು ಶಿಡ್ಲಘಟ್ಟದಲ್ಲಿ ಕೆಲಸ ಮಾಡುತ್ತಿದ್ದೆ. ದಿನಾಂಕಃ 28.03.2020 ರಿಂದ 28.07.2020 ರವರೆಗೂ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇ ಎಂದು ಇಲಾಖೆಯಿಂದ 4 ತಿಂಗಳ ರಜೆ ಇರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿದ್ದೀರ ಎಂದರೆ ಸಾಕ್ಷಿ ದಾಖಲೆಯನ್ನು ಹಾಜರುಪಡಿಸಿಲ್ಲ, ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ನಾನು 4 ತಿಂಗಳು ಸಹಾ ಕಛೇರಿಯಲ್ಲಿ

ಕೆಲಸ ಮಾಡಿದ್ದು ವಿಚ್ಛೇದನೆ ಪಡೆಯುವ ಉದ್ದೇಶದಿಂದ ಆಸ್ಪತ್ರೆಯಲ್ಲಿ ದಾಖಲಾಗಿದ್ದೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

19. ಎದುರುದಾರಳು ಮದುವೆಯಾದಾಗನಿಂದ 2022 ರವರೆವಿಗೂ ನನ್ನ ಜೊತೆ ಉತ್ತಮ ರೀತಿಯಲ್ಲಿ ಸಂಸಾರ ಮಾಡಿದ್ದರೂ ಸಹಾ ಸುಳ್ಳು ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸುಳ್ಳು.

**ಮುಂದುವರೆದ ಪಾಟೀ ಸವಾಲಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಸಹಿ/

ಹಿರಿಯ ಸಿವಿಲ್ ನ್ಯಾಯಾಧೀಶರು

ಚಿಂತಾಮಣಿ.